ಶ್ರೀ ಡಿ. ಬಿ. ಇನಾಂದಾರ್.— ಎಲ್ಲಾವನನ್ನು ವ್ಯವಸ್ಥೆ ಮಾಡಿಕೊಡುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.— ಇದನ್ನು ಪರಿಶೀಲನೆ ಮಾಡಂತ್ತೇವೆ ಎಂದರೆ ಖಂಡಿತವಾಗಿ ನಾನು ಒಪ್ಪುವುದಿಲ್ಲ. ಮಂಗಗನ ಕಾಯಿಲೆ ತೀರ್ಥಹಳ್ಳಿಯಲ್ಲಿ ತೀವ್ರವಾಗಿ ಹಬ್ಬುತ್ತಿದೆ. ತಂತಾರ್ಗಿ ಕೆಲಸ ಕ್ಕೆಗೊಳ್ಳುತ್ತೇವೆಂದು ಹೇಳಿ, ನಾವು ಇಲ್ಲಿಗೆ ಸಂಮ್ಮನೆ ಬಂದಿಲ್ಲ. ತನಿಖೆ ಮಾಡುತ್ತೇವೆ, ವರದಿ ತರಿಸುತ್ತೇವೆಯೆಂದು ಹೇಳುವುದು ಸರಿಯಲ್ಲ. ಇದು ಎಷ್ಟು ಗಂಭೀರವಾದ ವಿಚಾರ.

ಶ್ರೀ ಡಿ. ಬಿ ಇನಾಂದಾರ್.— ಈಗಾಗಲೇ ಒಂದು ಅಂಬುಲೇನ್ಸ್ ಕೊಟ್ಟಿದ್ದೇವೆ. ಟ್ರೀಟ್‌ಮೆಂಟ್ ಕೊಡುತ್ತಾ ಇದ್ದಾರೆ.

ಶ್ರೀ ಪಟಮಕ್ಕಿ ರತ್ನಾಕರ್.— ಯಾವ ಆಸ್ಪತ್ರೆಯಲ್ಲಿ ಆಂಬ್ಯುಲೆನ್ಸ್ ಇದೆ, ಹಾಗಂತಾ ನಮ್ಮ ಜಿಲ್ಲಾ ಮಂತ್ರಿಗಳು ಹೇಳಲಿ.

ಅಧ್ಯಕ್ಷರು.—ಅವರ ಉತ್ತರದಲ್ಲಿ ಸತ್ಯಾಂಶ ಇಲ್ಲವೆಂದರೆ ಕೇಳಿ.

ಶ್ರೀ ಕೆ. ಎಚ್. ಪಾಟೀಲ್.— ಇದು ತೀವ್ರವಾಗಿ ಹಬ್ಬುತ್ತಾ ಇರುವ ಕಾಯಿಲೆ. ಇಲ್ಲೇ ಕುಳಿತುಕೊಂಡು ಪರದಿಯಂನ್ನು ಕೊಡುವುದರ ಬದಲು ಒಂದುಸಾರಿ ತೀರ್ಥಹಳ್ಳಿಗೆ ಭೇಟಿಕೊಟ್ಟು ಅಲ್ಲಿನ ಪರಿಸ್ಥಿತಿಯನ್ನು ಗಮನಿಸಬೇಕು. ಇದರ ಬಗ್ಗೆ ಕ್ರಮ ತೆಗೆದುಕೊಂಡರೆ ಒಳ್ಳೆಯದು. ಏಕೆಂದರೆ ಇದು ಸಾಧಾರಣವಾದ ವಿಚಾರವಲ್ಲ,

ಶ್ರೀ ಡಿ. ಬಿ, ಇನಾಂದಾರ್.—ಶಾಸಕರನ್ನು ಕರೆದುಕೊಂಡು ಹೋಗಿ ಅ್ಲ ವ್ಯವಸ್ಥೆ ಮಾಡುತ್ತೇನೆ.

ಅಧ್ಯಕ್ಷರು.—ನಿಮಗೆ ಎಬಿಸಿಡಿಯಂನ್ನು ಹೇಳಿಕೊಡಬೇಕಾ, ಕಾಲಿಂಗ್ ಅಟೆನ್‌ಷನ್ ಇರುವಾಗ ಬೇರೆಯವರಿಗೆ ಅವಕಾಶವಿಲ್ಲ.

ಶ್ರೀ ಬಿ. ಸ್ವಾಮಿರಾವ್,—ಅಧ್ಯಕ್ಷರೇ ತೀರ್ಥಹಳ್ಳಿ, ಹೊಸನಗರ ಒಟ್ಟಿಗೆ ಸೇರಿರುವುದರಿಂದ ಕಾಡುಪ್ರದೇಶ ಜಾಸ್ತಿಯಾಗಿದೆ. ಇದರಿಂದ ಮಂಗನ ಕಾಯಿಲೆ ಜಾಸ್ತಿಯಾಗಿದೆ, ಇದು ಕಾಯಿಲೆ ಎಲ್ಲಾ ತರಹದ ಕಾಯಿಲೆಯಂತಲ್ಲಾ. ಈ ಕಾಯಿಲೆ ನಮ್ಮ ತಾಲ್ಲೂಕಿನಲ್ಲಿ ಮೊದಲು ಬಂದಾಗ ಎಷ್ಟೋ ಮನೆಗಳು ನಾಶವಾಗಿ ಹೋದವು. ಮಂತ್ರಿ ಡಾಕ್ಟರ್‌ಗಳಿಗೂ ಸಹ ತರಬೇತಿ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ನೀವು ಕೇಳುವುದನ್ನು ನೇರವಾಗಿ ಕೇಳಿಬಿಡಿ.

ಶ್ರೀ ಬಿ. ಸ್ವಾಮಿರಾವ್.—ವಿಶೇಷವಾದ ಗಮನವನ್ನು ಅಲ್ಲಿಗೆ ಕೊಟ್ಟು, ಒಂದು ತಂಡವನ್ನು ಕಳುಹಿಸಿಕೊಡಬೇಕು. ಹೊಸನಗರ ತಾಲ್ಲೂಕಿನಲ್ಲಿ ಸಹಾ ಈ ಕಾಯಿಲೆ ಇದೆ.

ಅಧ್ಯಕ್ಷರು.—ನೀವು ಅಪರ ಜೊತೆ ಹೋಗಿ ಚರ್ಚೆ ಮಾಡಿ.

ನಿಯಮ ೫೩ಳಿರ ಪ್ರಕಾರ ಚರ್ಚೆ

ತೆಲುಗು ಗಂಗಾ ಯೋಜನೆ ಬಗ್ಗೆ ಸರ್ಕಾರದ ನಿಲುವು

ಶ್ರೀ ಗುರುಪಾದಪ್ಪ ನಾಗಮತಾರ ಪಲ್ಲ.—ಆಂಧ್ರದ ಮುಖ್ಯಮಂತ್ರಿಗಳು ಪದೇ ಪದೇ ಪತ್ರಿಕಾ ಹೇಳಿಕೆಯನ್ನು ಕೊಟ್ಟು ತೆಲುಗು ಗಂಗಾ ಬಗ್ಗೆ ತಮ್ಮ ಪರ ದೃಢವಾದನಿಲುವನ್ನು ವ್ಯಕ್ತಪಡಿಸುತ್ತಿದ್ದಾರೆ. ಕರ್ನಾಟಕ ಸರ್ಕಾರದ ನಿಲುವು ಏನೆಂಬುದನ್ನು ಸದನಕ್ಕೆ ತಿಳಿಸುವಿರಾ ?

ಶ್ರೀ ಎಚ್. ಡಿ. ದೇವೇಗೌಡ.—ಆಂಧ್ರಪ್ರದೇಶದ ಮುಖ್ಯ ಮಂತ್ರಿಗಳು ಪದೇ ಪದೇ ತೆಲುಗು ಗಂಗಾ ಬಗ್ಗೆ ಹೇಳಿಕೆ ಕೊಡುತ್ತಾ ಇದ್ದಾರೆ ಎನ್ನುವ ವಿಷಯ ನಿಜ. ಅವರು ಹೇಳಿಗ ಕೊಡತಕ್ಕದನ್ನು ನಾವು ತಡೆಹಿಡಿಯಲಿಕ್ಕೆ ಸಾಧ್ಯವಾಗಂವ್ದಿಲ್ಲ. ಆದರೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಅವರ ಇತ್ತೀಚಿನ ಹೇಳಿಕೆ ರಾಜಕೀಯಂವಾದ ಹೇಳಿಕೆಯೆಂದು ಭಾವಿಸಬೇಕಾ

ಗಿಲ್ಲ. ಅವರ ಹೇಳಿಕೆಯನ್ನು ನೋಡಿದಾಗ He states, "It is our right, the Centre cannot stop it. N. T. Rama Rao, declares that the Government intended to carry on with the implementation of the controversial Telugu Ganga Project, regardless whether the Centre approved it or not. Whether it is cleared it or not, the project will be carried on. ಸ್ವಾಮಿ. ಇಂಟರ್ ಸ್ಟೇಟ್ ರಿವರ್ ಡಿಸ್‌ಪ್ಯೂಟ್ ಆ್ಯಕ್ಟ್‌ನ್ನು ಧಿಕ್ಕರಿಸಿ ನಡೆದುಕೊಳ್ಳುವ ಶಕ್ತಿ ಯಾರಿಗೂ ಇಲ್ಲ. ಇಂಟರ್ ಸ್ಟೇಟ್ ರಿವರ್ ಡಿಸ್‌ಪ್ಯೂಟ್ ಆ್ಯಕ್ಟ್ ವ್ಯಾಪ್ತಿಯಲ್ಲಿ ಸಂಬಂಧಪಟ್ಟಿಂತಹ ರಾಜ್ಯಗಳ ಪಂಚಾಯಿತಿದಾರರು ಕೊಟ್ಟಿರತಕ್ಕ ತೀರ್ಪಿಗೆ ಮಾನ್ಯತೆ ಮಾಡದೇ ಹೋದರೆ ಕೇಂದ್ರ ಸರ್ಕಾರಕ್ಕೆ ಅಂತಿಮ ಅಧಿಕಾರ ಇದೆ. ಯಾವ ರಾಜ್ಯ ಸರ್ಕಾರ ಇದರಲ್ಲಿ ಉಲ್ಲಂಘನೆ ಮಾಡುತ್ತದೆ ಆ ಸರ್ಕಾರವನ್ನು, ಅಥವಾ ತೀರ್ಪನ್ನು ಜಾರಿಗೆ ತರತಕ್ಕಂಥಾದ್ದಕ್ಕೆ ಯಾವ ಕ್ರಮ ತೆಗೆದುಕೊಳ್ಳಬೇಕೋ ಆ ಬಂದು ಕಾನೂನು ಇಂಟರ್ ಸ್ಟೇಟ್ ರಿವರ್ ಡಿಸ್‌ಪ್ಯೂಟ್ ಆ್ಯಕ್ಟ್‌ನಲ್ಲಿ ಅಡಕವಾಗಿದೆ. ಅವರು ಹೇಳಿರತಕ್ಕದ್ದು ರಾಜಕೀಯ ಹೇಳಿಕೆಯೇ ಪರಂತು ಕಾನೂನಿನ ಚೌಕಟ್ಟಿನ ಹೇಳಿಕೆಯಲ್ಲ ಎಂದು ಭಾವಿಸುತ್ತೇನೆ. ಈ ಸಂದರ್ಭದಲ್ಲಿ ಇಷ್ಟು ಮಾತ್ರ ಹೇಳಲಿಕ್ಕೆ ಇಷ್ಟಪಡುತ್ತೇನೆ. ಯಾವುದೇ ಕಾರಣ ದಿಂದ ನಮ್ಮ ನೀರಿನ ಹಕ್ಕನ್ನು ಬೇರೆಯವರಿಗೆ ಬಿಟ್ಟುಕೊಡಲಿಕ್ಕೆ ಸಿದ್ಧ ಇಲ್ಲ. ಆ ಹಕ್ಕನ್ನು ಉಳಿಸಿ ಕೊಳ್ಳಲಿಕ್ಕೆ ಅವಶ್ಯ ಇದ್ದರೆ ಎಲ್ಲಾ ತ್ಯಾಗಕ್ಕೂ ಸಿದ್ಧರಾಗಬೇಕಾಗುತ್ತದೆ. ಇದು ಕೇವಲ ಒಂದು ಪಕ್ಷದ ಪ್ರಶ್ನೆಯಲ್ಲ. ಇಡೀ ರಾಜ್ಯದ ಪ್ರಶ್ನೆ ಇದೆ. ತಾವೆಲ್ಲರೂ ಇದರ ಬಗ್ಗೆ ಸಮಾಲೋಚನೆ ಮಾಡ ಬೇಕಾಗುತ್ತದೆ. ಇದು ಸಂಪನ್ಮೂಲದ ಪ್ರಶ್ನೆ ಇದೆ.ಅದಕ್ಕೋಸ್ಕರ ಹೇಳಿದೆ, ಈ ಒಂದು ವಿಷಯದ ಬಗ್ಗೆ ನಾನು ಸವಾಲು ಎಂದು ಹೇಳುವುದಿಲ್ಲ. ನಮ್ಮ ಒಂದು ಹನಿ ನೀರನ್ನು ಕೂಡ ಅಕ್ರಮಣ ಮಾಡಲಿಕ್ಕೆ ಈ ಸರ್ಕಾರ ಅವಕಾಶ ಕೊಡುವುದಿಲ್ಲ. ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಂಗನವಾಡಿ ನೌಕರರ ಕುರಿತಂ

ಶ್ರೀ ಆರ್. ರಾಮಯ್ಯ.—ಸಮಗ್ರ ಬಾಲವಿಕಾಸ ಯೋಜನೆಯಂ ಯಶಸ್ವಿಯಾಗಲಂ ಆಯಾ ಗ್ರಾಮಗಳಲ್ಲಿರುವ ಮಹಿಳೆಯರನ್ನು ಅಂಗನವಾಡಿ ಕಾರ್ಯಕರ್ತರನ್ನಾಗಿ ಆಯ್ಕೆ ಮಾಡಿಕೊಳ್ಳಲು ಸರ್ಕಾರದ ಆದೇಶವಿದೆ. ಆದರೆ ಹಿರಿಯೂರು ತಾಲ್ಲೂಕಿನಲ್ಲಿ ಆಯ್ಕೆಯ ಸಮಿತಿಗೆ ಇದರ ನಿರ್ದೇಶನ ಇಲ್ಲವಾಗಿದೆಯೋ ಏನು ತಿಳಿಯದಾಗಿದೆ. ಬಹುತೇಕ ಕಾರ್ಯಕರ್ತೆಯರು ಪಟ್ಟಣದ ವಾಸಿಗಳಾಗಿದ್ದು ೯ ಗಂಟೆಗೆ ಪ್ರಾರಂಭವಾಗುವ ಈ ಶಾಲೆಗಳಿಗೆ ೧೦ ಗಂಟೆಯ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಸ್ಥಳ ಸೇರುವ ಹೊತ್ತಿಗೆ ಶಾಲೆಯನ್ನು ಮುಚ್ಚುವ ಸಮಯವಾಗಿರುತ್ತದೆ. ಇದರಿಂದಾಗಿ ಆಯ್ಕೆ ವ್ಯವಸ್ಥೆಯು ಸಮರ್ಪಕವಾಗಿಲ್ಲ. ಮನೆ ಬಾಗಿಲಲ್ಲೇ ನಡೆಯುವ ಹಳ್ಳಿಗಾಡಿನ ಅಂಗನವಾಡಿ ಶಾಲೆಗಳಿಗೆ ಆಯ್ಕೆಯ ಗ್ರಾಮಾಂತರ ವಿದ್ಯಾವಂತ ಮಹಿಳೆಯರಿಗೆ ಇದರ ಉಪಯೋಗದಿಂದ ವಂಚಿತವಾಗಿದೆ. ಜೊತೆಗೆ ಅನೇಕ ಕಾರ್ಯಕರ್ತೆಯರು ನೌಕರರ ಪತ್ನಿಯರಾಗಿದ್ದು ಇನ್ನು ಕೆಲವರು ಉತ್ತಮ ಸ್ಥಿತಿವಂತರಾಗಿರುತ್ತಾರೆ. ಇದರ ಒಟ್ಟಿನ ಸಮಗ್ರ ಚಿತ್ರ ಸುಳ್ಳು ವಿಳಾಸದೊಂದಿಗೆ ಸೇರ್ಪಡೆಯಾಗಿರುವುದು, ಉದ್ದೇಶಿಸಲ್ಪಟ್ಟವರಿಗೆ ಕೊಡುವ ನೆಪಕ್ಕಾಗಿ ಸರಿಯಾಗಿ ಜಾಹೀರಾತು ಮಾಡಿಲ್ಲದಿರುವುದು ಕಾರಣಗಳಾಗಿವೆ. ಜೊತೆಗೆ ಜಿಲ್ಲಾಧಿಕಾರಿಗಳ ಸಹ ಕೇಂದ್ರದಲ್ಲಿರುವಂತೆ ಆದೇಶಿಸಿದ್ದಾಗ್ಯೂ ಅಲ್ಲಿಯ ಬಾಲವಿಕಾಸ ಯೋಜನಾಧಿಕಾರಿಯವರು ಸಂಬಂಧಿಕರ ವಿಳಾಸಕೊಟ್ಟು ಸತ್ಯವೂ ೨-೦೦ ಗಂಟೆಗೆ ಚಿತ್ರದುರ್ಗದಿಂದ ಬಂದು ಕೆಲಸಕ್ಕೆ ಹಾಜರಾಗುತ್ತಾರೆ. ಈಗಾಗಲೇ ಸುಮಾರು ೩೦ ಕಾರ್ಯಕರ್ತೆಯರು ಪಟ್ಟಣವಾಸಿ ಗಳೆಂದು ಗುರುತಿಸಿದ್ದಾರೆ. ಇವರ ಸೇವೆಯನ್ನು ಹಿಂದಕ್ಕೆ ಪಡೆದು ಆ ಗ್ರಾಮದ ಮಹಿಳೆಯರಿಗೆ ಸೇವೆಯ ಅವಕಾಶವನ್ನು ಪಡಿತಿಕೊಡಬೇಕು, ಇದರೊಂದಿಗೆ ಬೇರೆ ಬೇರೆ ವಿಳಾಸದಲ್ಲಿ ಸೇರ್ಪಡೆಯಾಗಿರುವವರನ್ನು ಪತ್ತೆ ಹಚ್ಚಿ ಅವರನ್ನು ಸೇವೆಯಿಂದ ಬರ್ತಾಫ್ ಮಾಡಿ ಹಳ್ಳಿಗಾಡಿನವರಿಗೆ ಸೇವೆಯ ಅವಕಾಶವನ್ನು ಕಲ್ಪಿಸಬೇಕಾಗಿ ಕೋರುತ್ತೇನೆ.